# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/117/2015-16 ದಿನಾಂಕ :11-08-2016.

ಉಪಸ್ಥಿತರು:–ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| 1.ಬಾತಿ ಹಾಲಪ್ಪ ತಂದೆ ಲೇಟ್ ಬಾತಿ ಸಣ್ಣರಾಮಪ್ಪ<br>2.ಬಾತಿ ಭೀಮಪ್ಪ ತಂದೆ ಲೇಟ್ ಬಾತಿ ಸಣ್ಣರಾಮಪ್ಪ<br>ಗ್ರಾಮ:–ಅಲಬೂರು ತಾ:–ಹ.ಬೊ.ಹಳ್ಳಿ | ತಳವಾರ ಹನುಮಂತಪ್ಪ ತಾಯಿ ಗಂಗಮ್ಮ<br>ಗ್ರಾಮ:–ಹೊಸಪೇಟೆ ತಾ:–ಹೊಸಪೇಟೆ |

**ವಿವಾದಿತಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಅಲಬೂರು | 437/ಎ | 7–07 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಅಲಬೂರು ಗ್ರಾಮದ ನಿವಾಸಿಯಾದ 1. .ಬಾತಿ ಹಾಲಪ್ಪ ತಂದೆ ಲೇಟ್ ಬಾತಿ ಸಣ್ಣರಾಮಪ್ಪ 2.ಬಾತಿ ಭೀಮಪ್ಪ ತಂದೆ ಲೇಟ್ ಬಾತಿ ಸಣ್ಣರಾಮಪ್ಪ ಇವರು ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆಯನ್ನು ಮಾಡಲು ದಿನಾಂಕ:20.04.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21ರ ನೋಟೀಸನ್ನು ದಿನಾಂಕ:22.04.2016 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:18.05.2016 ರಂದು ತಳವಾರ ಹನುಮಂತಪ್ಪ ತಾಯಿ ಗಂಗಮ್ಮ ಇವರು ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.120/15–16ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ರವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:09.06.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:09.06.2016 ರಿಂದ 27.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಹೇಳುವಂತೆ; ಸದರಿ ತಕರಾರುದಾರರಿಗೂ ಮತ್ತು ನಮಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಹಾಗೂ ಅಪರಿಚಿತ ವ್ಯಕ್ತಿಯಾಗಿರುತ್ತಾರೆ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ತಕರಾರುದಾರರು ಸತತವಾಗಿ ಗೈರುಹಾಜರಾಗಿರುತ್ತಾರೆ. ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಕಂಡುಬಂದಿರುತ್ತದೆ.

ಪ್ರಕರಣದಲ್ಲಿ ಅರ್ಜಿದಾರರು ನೀಡಿದ ಹೇಳಿಕೆ ಮತ್ತು ದಾಖಲೆಯನ್ನು ಪರಿಶೀಲಿಸಿ, ಅರ್ಜಿದಾರರ ಹೆಸರಿಗೆ ಪಾಲು ವಿಭಾಗ ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

ಪುಟ–2ಕ್ಕೆ..

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.120/2015-16ರ ಪ್ರಕರಣದಲ್ಲಿ ಈ ಕೆಳಗಿನಂತೆ ಪಾಲು ವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

| ಕ್ರಮ ಸಂಖ್ಯೆ | ತಾಲೂಕು | ಗ್ರಾಮ | ಸರ್ವೆ ನಂಬರ್ | ವಿಸ್ತೀರ್ಣ [ಎಕರೆಗಳಲ್ಲಿ] | ಹಕ್ಕು ಬದಲಾವಣೆ ಪಡೆದವರು |
|---|---|---|---|---|---|
| 01. | ಹಗರಿಬೊಮ್ಮನಹಳ್ಳಿ | ಅಲಬೂರು | 437/ಎ | 3-54 | ಬಾತಿ ಹಾಲಪ್ಪ ತಂದೆ ಲೇಟ್ ಬಾತಿ ಸಣ್ಣರಾಮಪ್ಪ |
| | | | | 3-53 | ಬಾತಿ ಭೀಮಪ್ಪ ತಂದೆ ಲೇಟ್ ಬಾತಿ ಸಣ್ಣರಾಮಪ್ಪ |

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:11.08.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

11/8/16

[ವಿ.ಹೆಚ್.ಮಲ್ಲಿಕಾರ್ಜುನ]
**ಉಪ ತಹಶೀಲ್ದಾರರು,**
**ನಾಡ ಕಾರ್ಯಾಲಯ,ಕೋಗಳಿ**

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.